ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 04.07.2022.

**ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಫ್ .ಎಂ. ಎಂ. ವಕೀಲರಿಂದ.**

ನಾನು ಮೂಲತಹ ಹಿರೇಕೆರೂರು ತಾಲೂಕು ಅರಳೀಕಟ್ಟಿ ಗ್ರಾಮದವನು ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನ್ನ ತಂದೆ ಅಲ್ಲಿಯೇ ಹುಟ್ಟಿದ್ದು, ನಾನು ಬ್ಯಾಡಗಿ ತಾಲೂಕು ಅಗಸನಹಳ್ಳಿ ಗ್ರಾಮದಲ್ಲಿ ಹುಟ್ಟಿ ಬೆಳೆದು ಇಂದಿಗೂ ವಾಸವಾಗಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾವು ಮೂಲತಃ ಅರಳೀಕಟ್ಟಿಯಿಂದ ಅಗಸನಹಳ್ಳಿಗೆ ಬಂದಿರುವುದರಿಂದ ನಮ್ಮನ್ನು ಅರಳೀಕಟ್ಟಿ ಎನ್ನುವ ಮನತೆನದ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. ಅರಳೀಕಟ್ಟಿ ಗ್ರಾಮದಲ್ಲಿ ನಮ್ಮ ಮನೆತನದ ಹೆಸರು ಕರ್ಜಗಿ ಎಂದು ಇರುತ್ತದೆ.

2) ಫಕ್ಕೀರಪ್ಪ ತಂದೆ ಮಲ್ಲಪ್ಪ ಕನವಳ್ಳಿ ಇವರ ಮಗಳನ್ನು ನನ್ನ ತಂದೆ ಲಗ್ನ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಫಕ್ಕೀರಪ್ಪನು 1 ನೇ ವಾದಿಯ ಗಂಡನ ಅಣ್ಣ ಎಂದರೆ ಸರಿ. ನಮ್ಮ ಮನೆ ಮೇಲಗಿರಿ ಪ್ಲಾಟನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅಗಸನಹಳ್ಳಿಯಲ್ಲಿ ನಮ್ಮ ಮನೆ ಬರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪಿಡಬ್ಲೂ-2 ನೇದವರ ಮನೆಯ ಬಾಜುವಿನಲ್ಲಿ ನಮ್ಮ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ದೂರ ಆಗುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಮೇಲಗಿರಿ ಪ್ಲಾಟನಲ್ಲಿ ನಮ್ಮ ಮನೆ ಇದ್ದರೂ ಸಹಿತ ಅಗಸನಹಳ್ಳಿಯಲ್ಲಿ ನಮ್ಮ ಮನೆ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆ ನಂಬರನ್ನು ನಾನು ಸರಿಯಾಗಿ ನೋಡಿರುವುದಿಲ್ಲ. ನಮ್ಮ ಮನೆಯ 20 X 25 ಅಡಿ ವಿಸ್ತೀರ್ಣ ಇರುತ್ತದೆ.

3) ನಾವು ವಾಸ ಮಾಡುವ ಮನೆ ನಮಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸದರಿ ಮನೆಯಲ್ಲಿ ನಾವು 20 ವರ್ಷಗಳಿಂದ ಬಾಡಿಗೆ ತರೀಖ ವಾಸ ಮಾಡಿಕೊಂಡಿದ್ದು, ದಾಖಲೆಗಳು ನಮ್ಮ ತಂದೆ ವ ತಾಯಿ ಹೆಸರಿನಲ್ಲಿ ಇರುವುದಿಲ್ಲ. ನಾನು ವಾಸ ಮಾಡುವ ಪೂರ್ವಕ್ಕೆ ಮಾಲತೇಶ ಹಾವೇರಿ ಇವರ ಮನೆ, ಪಶ್ಚಿಮಕ್ಕೆ ಮಹದೇವಪ್ಪ ಕನವಳ್ಳಿ ಇವರ ಮನೆ, ಉತ್ತರಕ್ಕೆ ರಸ್ತೆ, ಮತ್ತು ದಕ್ಷಿಣಕ್ಕೆ ಮಾಲತೇಶ ಹಾವೇರಿ ಇವರ ಮನೆ ಇರುತ್ತದೆ. ನಾನು ಆಧರಿಸುವ ವಾಸವಿರುವ ಮನೆಯ ಚೆಕ್ಕುಬಂದಿ ಸಂಪೂರ್ಣ ತಪ್ಪಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

4) ಬ್ಯಾಡಗಿ ತಾಲೂಕಿನ ಪುರಸಭೆ ಆಸ್ತಿ ಸಂಖ್ಯೆ 172/165 ರ ಆಸ್ತಿಯ ಪೂರ್ವಕ್ಕೆ ಮಹದೇವಕ್ಕ ಕೋಂ ಬಸಪ್ಪ ಕಬ್ಬಿಣದ ಇವರ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದುರ್ಗಮ್ಮ ಕೋಂ ಗುಡ್ಡಪ್ಪ ಕನವಳ್ಳಿ ಇವರ ಆಸ್ತಿ ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪಶ್ಚಿಮಕ್ಕೆ ಬ್ಯಾಡಗಿ ಪುರಸಭೆ ಆಸ್ತಿ ಸಂಖ್ಯೆ 171/164 ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ . ಸದರಿ ಆಸ್ತಿ ಸಂಖ್ಯೆ 172/165 ರ ಪಶ್ಚಿಮಕ್ಕೆ ಬೀರಪ್ಪ ಗುಡ್ಡಪ್ಪ ಬಣಕಾರ ಇವರ ಆಸ್ತಿ ಇರುತ್ತದೆ. ದಕ್ಷಿಣಕ್ಕೆ ಬ್ಯಾಡಗಿ ಪುರಸಭೆ ಆಸ್ತಿ ಸಂಖ್ಯೆ 183/175 ಬಿ ಇರುತ್ತದೆ ಎಂದರೆ ಸರಿ. ಪೂರ್ವ ಹಾಗೂ ಪಶ್ಚಿಮದ ಚೆಕ್ಕುಬಂದಿಯನ್ನು ನಾನು ಬುದ್ಧ್ಯಾಪೂರ್ವಕವಾಗಿ ತಪ್ಪು ಹೇಳಿರುತ್ತೇನೆ ಎಂದರೆ ಸರಿಯಲ್ಲ.

5) ವಾದಿಯರು ವಾಸಿಸುವ ಮನೆಯ ಆಜುಬಾಜಿನಲ್ಲಿ ನನ್ನ ಮನೆ ಇರುವುದಿಲ್ಲ ಎಂದರೆ ಸರಿ. ವಾದಿಯರಿಗೆ ದಾವಾ ಆಸ್ತಿಯು ಪಿತ್ರಾರ್ಜಿತವಾಗಿ ಬಂದ ಆಸ್ತಿ ಆಗಿರುತ್ತದೆ. ದಾವಾ ಆಸ್ತಿಯು ವಾದಿಯರಿಗೆ ಮಲ್ಲಪ್ಪ ಕನವಳ್ಳಿ ಇವರಿಂದ ಬಂದಿರುತ್ತದೆ. ಆ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಯು ಯಾವಾಗ ಮತ್ತು ಎಷ್ಟನೇ ಇಸ್ವಿಯಲ್ಲಿ ಬಂದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಪುರಸಭೆ ಆಸ್ತಿ ಸಂಖ್ಯೆ 172/165 ಇದು 2 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ.

6) ಸದರಿ ಪುರಸಭೆ ಆಸ್ತಿ ಸಂಖ್ಯೆ 172/165 ನ್ನು 2 ನೇ ಪ್ರತಿವಾದಿಯ ತಂದೆ ನೀಲಪ್ಪ ಎಂಬುವವನು ಗುಡ್ಡಪ್ಪ ನಿಂಗಪ್ಪ ಕನವಳ್ಳಿ ಮತ್ತು ಶ್ರೀಮತಿ ನಿಂಗವ್ವ ಕೋಂ ಸುಗೀರಪ್ಪ ಕನವಳ್ಳಿ ಇವರಿಂದ 14.04.1965 ರಲ್ಲಿ ಖರೀದಿ ಹಿಡಿದ ಆಸ್ತಿ ಎಂದರೆ ಸರಿಯಲ್ಲ. ಈ ಬಗ್ಗೆ ನೊಂದಾಯಿತ ಖರೀದಿ ಪತ್ರ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೊದಲು ಮಾಳಗಿ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಅದು ಹಳೆಯದಾಗಿ ಬೀಳುವ ಸ್ಥಿತಿಯಲ್ಲಿದ್ದುದರಿಂದ, ಬ್ಯಾಡಗಿ ಪುರಸಭೆಯಿಂದ ಕಟ್ಟಡ ಪರವಾನಿಗೆಯನ್ನು ಪಡೆದು ಹೊಸ ಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪುರಸಭೆ ಆಸ್ತಿ ಸಂಖ್ಯೆ 172/165 ಇದಕ್ಕೆ ಪ್ರತಿವಾದಿಯರು ಸಂಪೂರ್ಣ ಹಕ್ಕಿನಿಂದ ಮಾಲೀಕರಾಗಿದ್ದು ಅವರೇ ಸ್ವಾಧೀನ ಅನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

7) ಅಗಸನಹಳ್ಳಿ ಗ್ರಾಮದಲ್ಲಿ ಬರುವಂತಹ ಆಸ್ತಿಗಳು ಮೂಲತಃ ಗಾಂವ ಠಾಣಾ ಆಸ್ತಿಗಳು ಎಂದರೆ ಸರಿಯಲ್ಲ. ಈ ಮೊದಲು ಸದರಿ ಆಸ್ತಿಗಳು ಮಾಸಣಗಿ ಗ್ರಾಮಪಂಚಾಯತಿ ವ್ಯಾಪ್ತಿಗೆ ಒಳಪಟ್ಟಿತ್ತು ಎಂದರೆ ಸರಿ.

ಮಧ್ಯಾಹ್ನದ 02-00 ಆಗಿದ್ದು, ಕಲಾಪದ ಅವಧಿ ಮುಕ್ತಾಯವಾದ್ದರಿಂದ, ಪಾಟೀ ಸವಾಲನ್ನು ಮಧ್ಯಾಹ್ನ 02-45 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.

ಮಧ್ಯಾಹ್ನದ ಅವಧಿ ಆರಂಭವಾದ್ದರಿಂದ ಸಾಕ್ಷಿದಾರನನ್ನು ಮತ್ತೆ ಕರೆಸಿ ಪ್ರಮಾಣೀಕರಿಸಲಾಯಿತು. ಪಾಟೀ ಸವಾಲನ್ನು ಮಧ್ಯಾಹ್ನ 02-45 ಗಂಟೆಗೆ ಮುಂದುವರಿಸಲಾಯಿತು.

1) ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳಿಗೆ ಅಳತೆ ಮತ್ತು ಚೆಕ್ಕುಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಹಿಡಿದಂತಹ ಆಸ್ತಿಗಳಿಗೆ ಮಾತ್ರ ಅಳತೆ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಇರುತ್ತದೆ ಎಂದರೆ ಸರಿಯಲ್ಲ. ಅಳತೆ ನಮೂದು ಇರುವ ಬಗ್ಗೆ ದಾವಾ ಆಸ್ತಿಯ ಪಂಚಾಯತ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಪುರಸಭೆಯ ದಾಖಲೆಯಾದ ನಿಪಿ-1 ನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ದಾವಾ ಆಸ್ತಿ ವಿಸ್ತೀರ್ಣವು 21 X 46 ವರೆ ನಮೂದು ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಪಂಚಾಯತ ದಾಖಲೆಗಳಲ್ಲಿ ಎಲ್ಲಿಯೂ ಅಳತೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

2) ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಇಬ್ಬರು ಹೆಣ್ಣು ಮಕ್ಕಳನ್ನು ನಾನು ಮತ್ತು ನನ್ನ ತಮ್ಮ ಮದುವೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಪ್ರಸ್ತುತ ವಾಸವಾಗಿರುವ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಇವರ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾವೇ ಮನೆಯನ್ನು ನಿರ್ಮಾಣ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಹನುಮಂತಪ್ಪ ಫಕ್ಕೀರಪ್ಪ ಕನವಳ್ಳಿ ಎರಡು ಎಕರೆ ಜಮೀನನ್ನು ನನಗೆ ಮತ್ತು ನನ್ನ ತಮ್ಮನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆಗೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಮಗೆ ನೀಡಿದ್ದರೂ ಸಹಿತ ನನ್ನ ತಂದೆಗೆ ಜಮೀನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ಬೆಳಗ್ಗೆ ನನ್ನ ಪಾಟೀ ಸವಾಲಿನಲ್ಲಿ ನಾವು ಈಗಿರುವ ಮನೆಯಲ್ಲಿ ಬಾಡಿಗೆ ತರೀಖ ಇರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

3) ದಾವಾ ಆಸ್ತಿಯು ಪೂರ್ವ-ಪಶ್ಚಿಮಾಭಿಮುಖವಾಗಿ 30 ಅಡಿ ಮತ್ತು ದಕ್ಷಿಣೋತ್ತರವಾಗಿ 40 ಅಡಿ ಇರುತ್ತದೆ ಎಂದು ನನ್ನ ಮುಖ್ಯ ವಿಚಾರಣೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿಸಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೇಲ್ಮುದ್ದಿ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಇಂದು ಪಿಡಬ್ಲೂ-1 ರವರ ಜೊತೆಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ಪ್ರಮಾಣ ಪತ್ರವನ್ನು ಮಹದೇವಪ್ಪ ಕನವಳ್ಳಿ(ಪಿಡಬ್ಲೂ-1)ಇವನೇ ಹೇಳಿ ಬರೆಯಿಸಿರುತ್ತಾನೆ ಎಂದರೆ ಸರಿಯಲ್ಲ. ಪಂಚಾಯತ ದಾಖಲೆಗಳನ್ನು ಕಾರ್ಯದರ್ಶಿ ಮತ್ತು ಪುರಸಭೆ ದಾಖಲೆಗಳನ್ನು ಮುಖ್ಯಾಧಿಕಾರಿಗಳು ಮಾಡುತ್ತಾರೆ ಎಂದರೆ ಸರಿ . ನಾನು ನನ್ನ ಮುಖ್ಯ ವಿಚಾರಣೆಯ ಎಲ್ಲ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ದುರ್ಗಮ್ಮ ಮತ್ತು ಅವರ ಮಕ್ಕಳು ನಾನು ಆಧರಿಸುವ 35 X 40 ಅಡಿ ವಿಸ್ತೀರ್ಣದ ಸ್ಥಳವನ್ನು ಎಂದಿಗೂ ಮಾಲ್ಕಿ ನಾತೆಯಿಂದ ವಹಿವಾಟು ಮಾಡಿರುವುದಿಲ್ಲ

ಎಂದರೆ ಸರಿಯಲ್ಲ. ವಾದಿಯರು ನಮ್ಮ ಸಂಬಂಧಿಕರು ಆಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.